ಪದಬಂಧ



**ಎಡದಿಂದ ಬಲಕ್ಕೆ**

1. ಜನವರಿ ಬಂತೆಂದರೆ ಎಲ್ಲೆಲ್ಲೂ ಎಷ್ಟೊಂದು ಹಸುಕರು! 4
3. ಪೂರ್ವಾಹ್ನ, ಅಪರಾಹ್ನಗಳ ನಡುವೆ...? 3
4. ಮುದುಕಿಯಾದರೂ ಪ್ರತಿ ಮಾತಿನಲ್ಲೂ ಎಂಥ ಸೊಕ್ಕು! 3
6. ಶರ್ಕರ ಸೇವನೆ ವಿಪರೀತವಾದರೆ ಪ್ರಾಣಹಾರಕವಾದೀತು 4
7. ಕಳೆದ ವರ್ಷದಿಂದ ತುಂಬ ಪ್ರಸಿದ್ಧವಾಗಿದೆ ಈ ಕಡಲ ತೀರ 4
8. ಆಶೆಪಟ್ಟಿದ್ದಕ್ಕೆ ತಕ್ಕಂತೆ ಮನಸೆಳೆಯುವಂತಿದೆ 4
10. ಕೆಟ್ಟ ಮಾತಿನಂತೆಯೇ ಇದು ಚುಚ್ಚುಮಾತು 4
12. ಯಾರೂ ಏರುವಂತಿಲ್ಲ ; ಇದು ದೇವೇಂದ್ರನ ಆನೆ 4
14. ಹುಗ್ಗಿ ಮಾಡಿಸು ; ಮಾಡಿಸಿದ ಎಲ್ಲವನ್ನೂ ಮುಚ್ಚಿಡು 4
16. ಪಕ್ಕದಲ್ಲೇ ಎಲ್ಲರೂ ಇರುವಾಗಲೂ ಅವನಿಗೆ ಬರೀ ಹೆದರಿಕೆ 3
17. ಮಜ್ಜಿಗೆ ಮಾರಿ ಬಂದವನಿಗೆ ಕೊಟ್ಟ ಕೂಲಿ ಹಿಂದುಮುಂದು! 3
18. ಸುಪ್ರಭಾತದ ಭಾಷೆಯಲ್ಲೇ ಒಳ್ಳೆಯ ಮಾತು 4

**ಮೇಲಿನಿಂದ ಕೆಳಕ್ಕೆ**

1. ಅತ್ಯಂತ ಪವಿತ್ರ ನದಿ; ಜಹ್ನು ಮಹರ್ಷಿಯ ಮಗಳು! 3
2. ಆ ದೃಶ್ಯ ಅಷ್ಟೊಂದು ರೌದ್ರವಾಗಲು ನೆತ್ತರೇ ಕಾರಣ 3
3. ಮಾಧವನ ಜೊತೆಗೇ ನೆನಪಾಗುವ ರಾಮಾಯಣದ ಜೇನಿನ ಕಾಡು! 4
5. ಹರುಕು ತೊಟ್ಟವರ ಬಗೆಗೆ ಬರೀ ವ್ಯಂಗ್ಯದ ಮಾತೇ? 3
7. ಕರಡಿಯ ಕೈಯಲ್ಲಿ ಈ ಸುಂದರ ಡಬ್ಬಿ ಹೇಗೆ? 4
9. ಕಲ್ಮಶಭರಿತ ಎಂಬುದನ್ನೇ ಕುಗ್ಗಿಸಿದರೂ ಅದೇ ಅರ್ಥ ಹೇಗೆ? 4
11. ಪುಣ್ಯ ಭೂಮಿಯ ನೆಲ ಅದೆಷ್ಟು ನಯವಾಗಿದೆ ನೋಡಿದಿರಾ? 3
13. ಪರರನ್ನು ಆಕ್ರಮಿಸಿ ಗೆಲ್ಲಲು ಬೇಕಾದ ಧೈರ್ಯ, ಶಕ್ತಿ? 4
14. ಚೆನ್ನಾಗಿ ಸಲಹಿದ್ದರಿಂದ ಬೆಳವಣಿಗೆ ಸಮೃದ್ಧ 3
15. ಸರ ತರಲೆಂದು ಕಳುಹಿದವನಿಂದ ಎಲ್ಲ ನೀರಿನ ಚೆಲ್ಲಿಹೋಗುವಿಕೆ! 3

---

### 02 ಮೇ 2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಹೋದರ 3. ಗೋದಾಮು 4. ಸಾರಂಗಿ 6. ಕಾಲಭಯ 7. ಹವಣಿಸು 9. ನರೋತ್ತಮ 12. ಆಮೆವೇಗ 14. ನರಕ 15. ಭಾವನೆ 16. ರಣರಂಗ

**ಮೇಲಿನಿಂದ ಕೆಳಕ್ಕೆ**

1. ಸಮುದಾಯ 2. ರಸಾರುಹ 3. ಗೋಪಾಲ 5. ಗಿರಣಿ 6. ಕಾರಕೂನ 8. ಸುರಸಂಗ 10. ರೋದನ 11. ಮಧುಕರ 12. ಆಸ್ತಿಭಾಗ 13. ವೇದನೆ

ಪ್ರಶ್ನಾಂಕಣ

## ಮೀನುಗಾರ ಮೀನು ಇದೆಯೇ?

ಇದೆ. ಮೀನುಗಾರರಂತೆಯೇ 'ಗಾಳ' ಹಿಡಿದು, ಕಾದು ಉಳಿದು, ತಾವಾಗಿಯೇ ಬಳಿ ಬಂದು ಸಿಕ್ಕಿ ಬೀಳುವ ಮೀನುಗಳನ್ನು ನುಂಗುವ ಮೀನುಗಾರ ಮತ್ಸ್ಯಗಳು ಇವೆ! ಗಾಳ ಹಾಕುವ ಮೀನುಗಳು (Angler Fish) ಎಂದೇ ಅವಕ್ಕೆ ಹೆಸರು ಕೂಡ.

ಈ ಮತ್ಸ್ಯಗಳಲ್ಲಿ 200 ಪ್ರಭೇದಗಳಿವೆ. ಸಾಮಾನ್ಯವಾಗಿ ಒಂದು ಅಡಿಗಿಂತ ಕಡಿಮೆ ಉದ್ದದ, ಗರಿಷ್ಠ 3.3 ಅಡಿ ಉದ್ದ ತಲುಪುವ ಈ ಮತ್ಸ್ಯಗಳದು ಅತ್ಯಂತ ಕುರೂಪ; ಅಷ್ಟೇ ಭಯಂಕರ ರೂಪ; ಅನ್ಯಲೋಕ ಜೀವಿ ಸದೃಶ ಸ್ವರೂಪ! ದಕ್ಷಿಣ ಸಾಗರ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲಿ, ಒಂದು ಕಿಲೋಮೀಟರ್‌ಗೂ ಅಧಿಕ ಆಳಗಳಲ್ಲಿ, ಅಲ್ಲಿನ ಶಾಶ್ವತ ಗಾಢ ಅಂಧಕಾರದಲ್ಲಿ ಈ ಮೀನುಗಳ ವಾಸ.

ಆಂಗ್ಲರ್‌ಗಳಲ್ಲಿ ಹೆಣ್ಣು ಮೀನುಗಳ ಅತಿ ವಿಶಿಷ್ಟ ಲಕ್ಷಣ ಅವುಗಳ ಶಿರಾಲಂಕರಣ. ಈ ಮತ್ಸ್ಯಗಳ ಹೆಣ್ಣುಗಳಲ್ಲಿ ಅವುಗಳ ನೆತ್ತಿಯಿಂದ ಉದ್ದನೆಯ ಕಡ್ಡಿಯಂತಹ ನಿರ್ಮಿತಿಯೊಂದು ಚಾಚಿ ಬೆಳೆದಿರುತ್ತದೆ (ಚಿತ್ರ1 ರಲ್ಲಿ ಗಮನಿಸಿ). ಆ ನಿರ್ಮಿತಿಯ ತುದಿಯಲ್ಲಿ ಮಾಂಸದ ಚೂರು ಎಂಬಂತೆಯೇ ಭ್ರಮೆ ಬರಿಸುವ ಒಂದು ರಚನೆ. ಗಾಳದ ತುದಿಯ ಆ ನಿರ್ಮಿತಿಯನ್ನು ಆವರಿಸಿ 'ಜೈವಿಕ ಬೆಳಕನ್ನು' ಹೊಮ್ಮಿಸುತ್ತ ನಿಂತ ಸೂಕ್ಷ್ಮ ಜೀವಿಗಳ ಹಿಂಡು. ಆಳ ಕಡಲಿನ ಕರಾಳ ಕತ್ತಲಿನಲ್ಲಿ ಜೀವಿಗಳ ಸಂಖ್ಯೆ ಬಹಳ ವಿರಳ. ಅಷ್ಟೇ ಅಲ್ಲ, ಅಂತಹ ಅಂಧಕಾರದಲ್ಲಿ ಆಹಾರವಾಗಬಲ್ಲ ಬಲಿ ಪ್ರಾಣಿಗಳನ್ನು ಪತ್ತೆಮಾಡಿ, ಅವುಗಳ ಬೆನ್ನುಹತ್ತಿ ಹಿಡಿಯುವುದು ಅಸಾಧ್ಯದ ಕೆಲಸ. ಅದಕ್ಕೇ ಇದೆಲ್ಲ ಸೋಜಿಗದ ತಂತ್ರ!

ಸಾಗರದಾಳದ ಕರಾಳ ಕತ್ತಲಿನಲ್ಲಿ ಹೆಣ್ಣು ಆಂಗ್ಲರ್ ಮೀನುಗಳು ಹೊಳೆವ ತುದಿಯ ತಮ್ಮ ಗಾಳವನ್ನು ಹಿಡಿದು ತಟಸ್ಥವಾಗಿ ನಿಲ್ಲುತ್ತವೆ. ಗಾಳದ ತುದಿಯ ಬೆಳಕಿನಿಂದ ಆಕರ್ಷಿತವಾಗುವ ಯಾವುದಾದರೂ ಬಲಿ ಪ್ರಾಣಿಗಳು ಈಜುತ್ತ ಬಳಿ ಬರುತ್ತವೆ (ಚಿತ್ರ 1 ನೋಡಿ). ಅಂಥ ಆಹಾರವನ್ನು ಆಂಗ್ಲರ್ ಮೀನುಗಳು ತಮ್ಮ ಬಾಯಿಂದ ಕ್ಷಣಾರ್ಧದಲ್ಲಿ ಹಿಡಿದು ನುಂಗುತ್ತವೆ.




ವಿಸ್ಮಯ ಏನೆಂದರೆ, ಆಂಗ್ಲರ್ ಮೀನುಗಳ ಗಂಡುಗಳು ಗಾಳ ಹಿಡಿಯುವುದೂ ಇಲ್ಲ; ಆಹಾರ ಸೇವಿಸುವುದೂ ಇಲ್ಲ. ಏಕೆಂದರೆ ಅವುಗಳದು ಜೀವನವಿಡೀ ಪರಾವಲಂಬಿ ಬದುಕು. ಗಂಡುಗಳು ತಾವು ಜನಿಸಿದ ಕೆಲ ದಿನಗಳೊಳಗೇ ಹೆಣ್ಣೊಂದನ್ನು ಹುಡುಕಿ ಅದರ ಶರೀರವನ್ನು ಕಚ್ಚಿ ಹಿಡಿಯುತ್ತವೆ; ಕೆಲ ಕಾಲದಲ್ಲೇ ಹೆಣ್ಣಿನ ಶರೀರಕ್ಕೇ ಸಂಪೂರ್ಣ ಬೆಸೆದು ಅದರ ದೇಹದ್ದೇ ಒಂದು ಭಾಗದಂತೆ ಆಗಿ ಬಿಡುತ್ತವೆ (ಚಿತ್ರ 2ರಲ್ಲಿ ಗಮನಿಸಿ). ರಕ್ತ ಪ್ರವಾಹ, ಆಮ್ಲಜನಕ, ಆಹಾರ ಎಲ್ಲವನ್ನೂ ಹೆಣ್ಣಿನ ಶರೀರದಿಂದಲೇ ಕದಿಯುತ್ತ, ಅಗತ್ಯವಾದಾಗ ಮಾತ್ರ ಸಂತಾನವರ್ಧನೆಗೆ ವೀರ್ಯಾಣುಗಳನ್ನು ಒದಗಿಸುತ್ತ ಉಳಿದಿರುತ್ತದೆ. ಪ್ರತಿ ಹೆಣ್ಣನ್ನೂ ಹೀಗೆ ನಾಲ್ಕೈದು ಗಂಡುಗಳು ಶಾಶ್ವತವಾಗಿ ಆಶ್ರಯಿಸಿ ಜೀವನ ಕಳೆಯುತ್ತವೆ!

■ ಎನ್. ವಾಸುದೇವ್